ದಿನಾಂಕಃ **03.12.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ಮಾನ್ಯ ಶ್ರೀಮತಿ. **RNB** ವಕೀಲರಿಂದಃ</u>

ಈ ದಾವೆಯನ್ನು ವಾದಿ **5** ನೇ ಪ್ರತಿವಾದಿ ವಿರುದ್ಧ ಹೂಡಿರುತ್ತಾರೆ. ವೆಂಕಟೇಶ್ ಒಬ್ಬರ ವಿರುದ್ಧವೇ ಹೂಡಿರುತ್ತಾರಾ ಎಂದರೆ ಹೌದು. ವಾದಿಯು ಸದರಿ ಜಾಗವನ್ನು ಖರೀದಿ ಮಾಡಿರುತ್ತಾರೆ. ಯಾರ ಬಳಿ ಖರೀದಿ ಮಾಡಿರುತ್ತಾರೆ ಎಂದು ಹೆಸರು ಗೊತ್ತಿಲ್ಲ. ವಾದಿಯ ನಿವೇಶನದ ಖಾತೆ ಸಂಖ್ಯೆ ನನಗೆ ತಿಳಿದಿರುವುದಿಲ್ಲ. ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ನಿವೇಶನದಲ್ಲಿ ವಾದಿ ಮನೆ ಕಟ್ಟಿರುತ್ತಾರೆ ಎಂದರೆ ಸರಿ. ಮನೆಯನ್ನು ಮಧ್ಯದಲ್ಲಿ ಕಟ್ಟಿದ್ದು ಸುತ್ತಲೂ ಜಾಗ ಇರುತ್ತದೆ. ಸದರಿ ಮನೆಯು ವಾದಿ, ಅವರ ಹೆಂಡತಿ ಮಗಳ ಹೆಸರಿನಲ್ಲಿ ಇದೆ. ವಾದಿಯ ನಿವೇಶನದ ಚಕ್ಕುಬಂದಿ ಪೂರ್ವಕ್ಕೆಃ ರಸ್ತೆ, ಪಶ್ಚಿಮಕ್ಕೆಃ ದಾರಿ, ಉತ್ತರಕ್ಕೆಃ ಖಾಲಿ ಜಾಗ ಅದರ ನಂತರ ಕೋಲಾಟದವರ ಮನೆ, ದಕ್ಷಿಣಕ್ಕೆಃ ಓಡಾಡುವ ಗಲ್ಲಿ ಇರುತ್ತದೆ. ವಾದಿಯ ಮನೆಯ ಪೂರ್ವಕ್ಕೆ **1** ಮತ್ತು **5** ನೇ ಪ್ರತಿವಾದಿಯ ಜಾಗ ಮತ್ತು ಮನೆ ಬರುತ್ತದೆ ಎಂದರೆ ಸರಿ. **1** ನೇ ಪ್ರತಿವಾದಿ ತಮ್ಮ ಜಾಗದ ಪಶ್ಚಿಮದಲ್ಲಿ ಬಂಡೆಕಲ್ಲು ಹಾಕಿರುತ್ತಾರೆ ಎಂದರೆ ಸರಿ. **5** ನೇ ಪ್ರತಿವಾದಿ ತಮ್ಮ ಮನೆಯ ಹಿಂದೆ ಬಂಡೆಕಲ್ಲು ಹಾಕಿರುತ್ತಾರೆ ಎಂದರೆ ಸರಿ.

ವಾದಿಯು ತಮ್ಮ ಮನೆಯ ಪಶ್ಚಿಮ ದಿಕ್ಕಿನಲ್ಲಿ ಓಡಾಡುತ್ತಾರೆ ಎಂದರೆ ಸರಿ, ಆದರೆ ಪೂರ್ವಕ ಕಡೆ ದಾರಿ ಇರುತ್ತದೆ. ವಾದಿಯ ನಿವೇಶನದ ಪೂರ್ವಕ್ಕೆ ಯಾವುದೇ ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ, ಪ್ರತಿವಾದಿಗಳ ಮನೆ ಇದೆ ಎಂದರೆ ಸರಿ, ಅವರು ಬಂಡೆ ಹಾಕಿರುತ್ತಾರೆ. ವಾದಿ ಪಶ್ಚಿಮದಲ್ಲಿ ಓಡಾಡುತ್ತಿದ್ದರೂ ಪೂರ್ವದ ಕಡೆ ದಾರಿ ಇದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಮನೆಯ ಬಾಗಿಲು ಉತ್ತರದ ದಿಕ್ಕಿಗೆ ಇರುತ್ತದೆ. **5** ನೇ ಪ್ರತಿವಾದಿಯ ಮನೆಯ ಉತ್ತರಕ್ಕೆ ಬಾತ್ ರೂಂ ಮತ್ತು ಶೆಡ್

ಇರುತ್ತದೆ ಮತ್ತು ಪಶ್ಚಿಮದ ಕಡೆ ಬಂಡೆ ಹಾಕಿರುತ್ತಾರೆ ಎಂದರೆ ಸರಿ. ಶೆಡ್ ಮತ್ತು ಸ್ನಾನ ಗೃಹ ಇರುವ ಕಾರಣ ಅಲ್ಲಿ ಓಡಾಡಲು ಯಾವುದೇ ದಾರಿ ಇರುವುದಿಲ್ಲ, ವಾದಿ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಜಾಗದ ಪೂರ್ವದಲ್ಲಿ 1 ನೇ ಪ್ರತಿವಾದಿ ಖಾಲಿ ಜಾಗ ಇರುತ್ತದೆ ಅದು ದಾರಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿದ್ದು ಅದಕ್ಕೆ ಪೂರಕವಾಗಿ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಪಾವಗಡ.

ಸಾಕ್ಷಿ ಸಹಿಃ